ಅಂಗಡಿಯಿಂದ ತರುವುದು, ರಾತ್ರಿ ಹನ್ನೊಂದಾಗುತ್ತಿದ್ದಂತೇ ಟೀವಿ ಹಾಲಿನ ದೀಪ ನಂದಿಸಿ ಸುಮಾರು ಹತ್ತು ನಿಮಿಷಗಳಲ್ಲಿ ಅಲ್ಲಿದ್ದ ಟೀವಿಯನ್ನು ಪಕ್ಕದ ರೂಮೊಂದಕ್ಕೆ ಸ್ಥಳಾಂತರಿಸಿ ಟೀವಿ ಹಾಲಿಗೆ ಬೀಗ ಹಾಕಿ ಒಂದಿಷ್ಟೂ ಸಂಶಯ ಬರದ ಹಾಗೇ ಮಾಡುತ್ತಿದ್ದ. ಆ ವಾರದ ಇಂಗ್ಲಿಷ್ ಆ್ಯಕ್ಷನ್ ಚಿತ್ರ ಸ್ವಲ್ಪ ಹೆಚ್ಚು ನೀರಸ ಬೇಸರ ಹುಟ್ಟಿಸುತ್ತಿದ್ದರೆ ಕಾರ್ಯಕ್ರಮ ನೋಡಲು ಬಂದವರು ಓಡಿಸು ಓಡಿಸು ಎನ್ನುತ್ತಿದ್ದರು. ಹಾಗೆಲ್ಲ ಓಡಿಸಲು ಬರುವುದಿಲ್ಲ ಎಲ್ಲರೂ ಹಣ ಕೊಟ್ಟಿದ್ದಾರೆ ಎಂದು ಬಶೀರ ಎಲ್ಲರ ಬಾಯಿ ಮುಚ್ಚಿಸುತ್ತಿದ್ದ. ಆ ಸಂದರ್ಭದಲ್ಲಿ ಬಶೀರ ಏನು ಬೈದರೂ ಜನ ತುಟಕ್ ಪಿಟಕ್ ಕೂಡ ಎನ್ನುತ್ತಿರಲಿಲ್ಲ. ಸಿಗರೇಟ್ ತಂದು ಪೂರೈಸಲು ಸಾಧ್ಯವಿಲ್ಲವೆಂದೂ, ಮತ್ತೆ ಎಲ್ಲರೂ ಕಡ ಕೇಳುತ್ತಾರೆಂದೂ ಮೂವತ್ತು ನಂಬರ್ ಅಥವಾ ಗಣೇಶ ಬೀಡಿ ಕಟ್ಟನ್ನು ತಂದು ಸಮಾಧಾನವಾಗುವವರೆಗೆ ಸೇದುತ್ತಿದ್ದರು. 'ಸ್ವಲ್ಪ ಬೀಡಿ ಇಟ್ಟುಕೊಳ್ರೋ... ಆಮೇಲೂ ಬೇಕು' ಎಂದರೆ ಏನು ನಡೆಯುತ್ತದೆ ಎಂದು ಪೂರ್ತಿ ಗೊತ್ತಿಲ್ಲದವರು 'ಆಮೇಲೆ ಏನು?' ಎನ್ನುತ್ತಿದ್ದರು. ಆಗ ಕೆಲವರು ಅದು ವೈಜ್ಞಾನಿಕ ಚಿತ್ರ ಎಂದರೆ ಇನ್ನು ಕೆಲವರು ಅದು ಭಕ್ತಿ ಪ್ರಧಾನ, ಆ್ಯಕ್ಷನ್, ಭಕ್ತಿಯ ಚಿತ್ರವೆಂದು ಜೋರಾಗಿ ನಗುತ್ತಿದ್ದರು. 'ನೋ ಗಲಾಟೆ ಪ್ಲೀಸ್' ಎಂದು ಬಶೀರ ಮತ್ತೆ ಜನರನ್ನು ಉದ್ದೇಶಿಸಿ ಕೈಜೋಡಿಸುತ್ತಿದ್ದ.



ಕೆಲವು ಸಾರಿ ಭಕ್ತಿ ಪ್ರಧಾನ ಚಿತ್ರದ ಮಧ್ಯದಲ್ಲಿ ಕೆಲವರು ಸುಮ್ಮ ಸುಮ್ಮನೇ ಲೈಟ್ ಆನ್ ಮಾಡಿ ಯಾರು ಯಾರು ತಮ್ಮ ಕೈಯನ್ನು ಎಲ್ಲೆಲ್ಲಿ ಇಟ್ಟುಕೊಂಡಿದ್ದಾರೆ ಎಂದು ನೋಡಿ ಮಜಾ ತೆಗೆದುಕೊಳ್ಳುತ್ತಿದ್ದರು. ಬೀಡಿಯ ಹೊಗೆ ಅದೆಷ್ಟು ತುಂಬುತ್ತಿತ್ತೆಂದರೆ ಲೈಟ್ ಹಾಕಿದೊಡನೆ ಯಾರಿಗೂ ಯಾರ ಮುಖವೂ ಕಾಣುತ್ತಿರಲಿಲ್ಲ. ಪ್ರತೀ ಸಾರಿಯ ಭಕ್ತಿ ಪ್ರಧಾನ ಚಿತ್ರ ಮುಗಿದು ಲೈಟ್ ಆನ್ ಮಾಡಿದ ಕೂಡಲೇ ಬಾಗಿಲ ಹತ್ತಿರ ಬಂದು ಎಲ್ಲರಗೂ ಶೇಕ್ ಹ್ಯಾಂಡ್ ಮಾಡಿ 'ಹೇಗಿತ್ತು... ಚೆನ್ನಾಗಿತ್ತಾ' ಎಂದು ಫೀಡ್‌ಬ್ಯಾಕ್ ಕೇಳುತ್ತಿದ್ದ. ಹಾಸ್ಟೆಲ್ ಪಕ್ಕದಲ್ಲೇ ಇದ್ದ ಚರ್ಚಿನ ಪಾದ್ರಿಯೊಬ್ಬ ತನ್ನ ಭಾನುವಾರದ ಪ್ರೇಯರ್ ಸೆಶನ್ ಮುಗಿಯುತ್ತಿದ್ದಂತೆ ಬಾಗಿಲಲ್ಲಿ ನಿಂತು ಭಕ್ತಾದಿಗಳಲ್ಲಿ 'ಹೇಗಿತ್ತು ಹೇಗಿತ್ತು' ಎಂಬಂತೆ ಕೇಳುತ್ತಿದ್ದ. ಚರ್ಚಿಗೆ ತಪ್ಪದೇ ಹೋಗುವ ಕೆಲವು ವಿದ್ಯಾರ್ಥಿಗಳು ಇಲ್ಲೂ ತಪ್ಪಿಸುತ್ತಿರಲಿಲ್ಲ. ನಮ್ಮ ಪಾದ್ರಿಯವರ ವೃತ್ತಿಪರತೆಯನ್ನು ಈ ಬಶೀರ ಯಾವಾಗ ಕಲಿತುಕೊಂಡ ಎಂದು ಅಂದುಕೊಂಡು ನಗುತ್ತಿದ್ದರು.

'ಬಶೀರ ಇವೆಲ್ಲ ರಿಸ್ಕ್...' ಎಂದು ನವೀನ ಕುಲಕರ್ಣಿ ಅಷ್ಟೇ ಅಲ್ಲ. ಉಳಿದವರೂ ಹೇಳಿದ್ದಿದೆ. ಆಗೆಲ್ಲ ಬಶೀರ 'ನೋಡು ಕುಲಕರ್ಣಿ, ಫಾರಿನ್ನರು ಯಾವಾಗ ಸೆಕ್ಸ್ ಮಾಡ್ತಾರೆ ಗೊತ್ತಾ. ಹದಿಮೂರು ಹದಿನಾಲ್ಕು. ನೀನು... ದೇವರ ದುವಾ ಇದ್ದರೆ ಇಪ್ಪತ್ತೊಂಬತ್ತಕ್ಕೆ... ಹದಿನಾಲ್ಕರಿಂದ ಇಪ್ಪತ್ತೊಂಬತ್ತರವರೆಗೆ ಅದರ ಬಗ್ಗೆ ನಮ್ಮ ಜನ ಎಷ್ಟು ತಲೆಹಾಳು ಮಾಡಿಕೊಳ್ಳುತ್ತಾರೆ ಮತ್ತು ಎಷ್ಟು ಸಮಯ

